**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಈಶ್ವರಿ ಚಂದ್ರನ್ | ಪ್ರಾಸಾ-8 |
| ಗಂಡನ ಹೆಸರು | : ಚಂದ್ರನ್ | ಚಾಸಾ-9 |
| ವಯಸ್ಸು | : 47 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 28.10.2025 |
| ವಾಸಸ್ಥಳ | : ಭದ್ರಾವತಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಆರೋಪಿಯ ಪರಿಚಯ ನನಗಿಲ್ಲ. ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-6 ನನ್ನ ಅಕ್ಕ. ಚಾಸಾ-7 ಮತ್ತು 8 ನಮ್ಮ ಸಂಬಂಧಿಕರು.

ದಿ.07.07.2023 ರಂದು ನಾವು ಬೆ.11.00 ರ ಸಮಯದಲ್ಲಿ ಸರ್ಕಾರಿ ಬಸ್ ನಲ್ಲಿ ಭದ್ರಾವತಿಯಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದೆವು. ಸದರಿ ಬಸ್ ನ ಸಂಖ್ಯೆ 21-02-15. ನನ್ನೊಟ್ಟಿಗೆ ಚಾಸಾ-5 ರಿಂದ 8 ರವರು ಇದ್ದರು. ನಾವು ಸಂಚಾರ ಮಾಡುತ್ತಿದ್ದ ಬಸ್ ಎದುರಿನಿಂದ ಬರುತ್ತಿದ್ದ ಸರ್ಕಾರಿ ಬಸ್ ಗೆ ಮ.3.00 ರ ಸಮಯಕ್ಕೆ ಮೂಡಿಗೆರೆಯಿಂದ ಸ್ವಲ್ಪ ಮುಂದೆ ಡಿಕ್ಕಿಯಾಗಿರುತ್ತದೆ. ತೀರ್ವ ಸ್ವರೂಪದ ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ ಮತ್ತು ಉಳಿದ ಪ್ರಯಾಣಿಕರನ್ನು ಇತರೆ ಸರ್ಕಾರಿ ಬಸ್ ನಲ್ಲಿ ಕಳುಹಿಸಿಕೊಡಲಾಗಿರುತ್ತದೆ. ಸದರಿ ಅಪಘಾತದಿಂದ ನನ್ನ ಬಲಭುಜ ಮತ್ತು ಎಡಗಾಲಿನ ಮಂಡಿಗೆ ನೋವಾಗಿರುತ್ತದೆ. ಇದನ್ನು ಹೊರತು ಪಡಿಸಿ ನನಗೆ ಇನ್ನ್ಯಾವುದೇ ವಿಷಯ ನನಗೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

KA-02-F-015 ಎಂಬ ಸರ್ಕಾರಿ ಬಸ್ ನಲ್ಲಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿ. ಸದರಿ ಬಸ್ ನ್ನು ಆರೋಪಿಯು ಚಲಾಯಿಸುತ್ತಿದ್ದರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾವು ಪ್ರಯಾಣಿಸುತ್ತಿದ್ದ ಸರ್ಕಾರಿ ಬಸ್ ನ್ನು ಅತಿವೇಗ ಮತ್ತು ಅಜಾಗ್ರಕತೆಯಿಂದ ಚಲಾಯಿಸಲಾಗುತ್ತಿತ್ತು ಎಂದರೆ ಸರಿ. ಆದ ಕಾರಣ ನಾವು ಪ್ರಯಾಣಿಸುತ್ತಿದ್ದ ಬಸ್ ಎದುರಿನಿಂದ ಬಂದಂತಹ KA-17-F-1901 ಎಂಬ ಸರ್ಕಾರಿ ಬಸ್ ಗೆ ಡಿಕ್ಕಿ ಪಡಿಸಲಾಗಿತ್ತು ಎಂದರೆ ಸರಿ. ಅದಾದ ನಂತರ ಚಾಸಾ-1 ರವರು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾವು ಚಲಾಯಿಸುತ್ತಿದ್ದ ಬಸ್ ನಿರ್ಲಕ್ಷ್ಯತನದಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಸದರಿ ವಿಷಯದ ಕುರಿತು

ದಿ.15.07.2023 ರಂದು ನನ್ನ ಹೇಳಿಕೆಯನ್ನು ಪೋಲಿಸರು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ</u>**

ಈ ದಿನ ಭದ್ರಾವತಿಯಿಂದ ಬಂದಂತಹ ಸರ್ಕಾರಿ ಬಸ್ ನ ಸಂಖ್ಯೆ ನನಗೆ ನೆನಪಿರುವುದಿಲ್ಲ. ಅಪಘಾತ ಸಂಭವಿಸಿದ ದಿನ ನಾನು ಪ್ರಯಾಣಿಸುತ್ತಿದ್ದ ಬಸ್ ನ ಸಂಖ್ಯೆಯನ್ನು ನೋಡಿರುವುದಿಲ್ಲ. ನಾವು ಆ ದಿನ ಪ್ರಯಾಣಿಸುತ್ತಿದ್ದ ಸಮಯದಲ್ಲಿ ಹೆಚ್ಚಿನ ಮಳೆಯಾಗುತ್ತಿತ್ತು ಎಂದರೆ ಸರಿ. ಆ ದಿನ ನಾವು ಪ್ರಯಾಣಿಸುತ್ತಿದ್ದ ಬಸ್ ಮೂಡಿಗೆರೆಯಿಂದ ಅತೀ ಹೆಚ್ಚು ಪ್ರಯಾಣಿಕರನ್ನು ತುಂಬಿಸಿಕೊಳ್ಳಲಾಗಿತ್ತು ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ಬಸ್ ಗೆ ರಸ್ತೆಯು ಏರು ಮುಖವಾಗಿತ್ತು ಎಂದರೆ ಸರಿ. ಎದುರಿನಿಂದ ಇಳಿಮುಖವಾಗಿ ಬಂದಂತಹ ಸರ್ಕಾರಿ ಬಸ್ ನಮ್ಮ ಬಸ್ ಗೆ ಡಿಕ್ಕಿ ಹೊಡೆದಿರುತ್ತದೆ ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ಬಸ್ ನ ಬಲಭಾಗಕ್ಕೆ ಆಳವಾದ ಪ್ರಪಾತವಿತ್ತು ಎಂದರೆ ಸರಿ. ಸದರಿ ಅಪಘಾತದಿಂದ ನಾನು ಪ್ರಜ್ಞಾಹೀನಳಾಗಿರುವುದಿಲ್ಲ. ಅಪಘಾತದ ನಂತರ ಮೂಡಿಗೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ನಮ್ಮ ಊರಿಗೆ ಹಿಂತಿರುಗಿರುತ್ತೇವೆ ಎಂದರೆ ಸರಿ. ಅದಾದನಂತರ ಈ ದಿನ ಮೂಡಿಗೆರೆಗೆ ಬಂದಿರುತ್ತೇನೆ ಎಂದರೆ ಸರಿ. ಅಪಘಾತ ಸಂಭವಿಸಿದ ದಿನ ಪೋಲಿಸರಿಗೆ ಹೇಳಿಕೆಯನ್ನು ನೀಡಿದನ್ನು ಹೊರತುಪಡಿಸಿ ನಂತರದಲ್ಲಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ನಾಗಯ್ಯ ಹಿರೇಮಠ್ | ಪ್ರಾಸಾ-9 |
| ತಂದೆಯ ಹೆಸರು | : ಮೃತ್ಯುಂಜಯ | ಚಾಸಾ-10 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ನಿರ್ವಾಹಕ | ದಿನಾಂಕಃ 28.10.2025 |
| ವಾಸಸ್ಥಳ | : ರಾಮದುರ್ಗ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಕಳೆದ 22 ವರ್ಷಗಳಿಂದ ನಾನು ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.07.07.2023 ರಂದು ಹುಬ್ಬಳ್ಳಿಯಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಸರ್ಕಾರಿ ಬಸ್ ನಲ್ಲಿ ನಾನು ನಿರ್ವಾಹಕನಾಗಿ ಪ್ರಯಾಣಿಸುತ್ತಿದ್ದೆ. ಸದರಿ ಬಸ್ ನ ಸಂಖ್ಯೆ KA-21-215 ಆಗಿರುತ್ತದೆ. ಕೊಟ್ಟಿಗೆಹಾರದ ಬಳಿ ಪ್ರಯಾಣಿಕರಿಗೆ ಟಿಕೆಟ್ ನ್ನು ವಿತರಿಸುತ್ತಿರುವಾಗ ತಕ್ಷಣವಾಗಿ ಬಸ್ ಬ್ರೇಕ್ ಹಾಕಿದ ಕಾರಣ ಬಸ್ ನಲ್ಲಿದ್ದ ಕಂಬಿಗೆ ಹೊಡೆದುಕೊಂಡು ನಾನು ಮೂರ್ಛೆ ತಪ್ಪಿ ಕೆಳಗೆ ಬಿದ್ದಿರುತ್ತೇನೆ. ನಂತರ ಆಂಬ್ಯುಲೆನ್ಸ್ ವಾಹನದಲ್ಲಿ ನನ್ನನ್ನು ಬೆಳ್ತಂಗಡಿಯ ಆಸ್ಪತ್ರೆಗೆ ದಾಖಲು ಮಾಡಲಾಗಿರುತ್ತದೆ. ಇದನ್ನು ಹೊರತು ಪಡಿಸಿ ನನಗೆ ಇನ್ನ್ಯಾವುದೇ ವಿಷಯ ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಆ ದಿನ ಆರೋಪಿಯು ಬಸ್ ನ್ನು ಚಲಾಯಿಸುತ್ತಿದ್ದರು. ಆ ದಿನ ಆರೋಪಿಯು ತಾವು ಚಲಾಯಿಸುತ್ತಿದ್ದ ಬಸ್ ನ್ನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿದ ಕಾರಣ ಎದುರಿನಿಂದ ಬಂದಂತಹ KA-17-F-1909 ಎಂಬ ಇನ್ನೊಂದು ಸರ್ಕಾರಿ ಬಸ್ ಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನ್ನ ಎಡ ಮತ್ತು ಬಲ ಭುಜಕ್ಕೆ ಗಾಯವಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತದಿಂದ ಎರಡೂ ಸರ್ಕಾರಿ ಬಸ್ ಗಳು ಜಕಂಗೊಂಡಿರುತ್ತವೆ ಎಂದರೆ ಸರಿ. ಸದರಿ ಅಪಘಾತದಿಂದ ಉಳಿದ ಎರಡೂ ಬಸ್ ನಲ್ಲಿ ಇದ್ದ ಪ್ರಯಾಣಿಕರಿಗೆ ಸಣ್ಣ ಪ್ರಮಾಣದ ಗಾಯಗಳಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಯ ನಿರ್ಲಕ್ಷ್ಯತನದಿಂದ ಅಪಘಾತವು ಸಂಭವಿಸಿರುತ್ತದೆ ಎಂದು ಚಾಸಾ-1 ರವರು ದೂರು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರಯಾಣಿಕರಿಗೆ ಗಾಯವಾಗಲು ಆರೋಪಿಯ ನಿರ್ಲಕ್ಷ್ಯತನವೇ ಕಾರಣ ಎಂದರೆ ಸರಿಯಲ್ಲ. ಸದರಿ ವಿಷಯದ ಕುರಿತು

ದಿ.10.07.2023 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ 1 ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ಕಂಡುಬರುವ ಬಸ್ ನಲ್ಲಿ ಆ ದಿನ ತಾನು ಪ್ರಯಾಣಿಸುತ್ತಿರುವುದಾಗಿ ಗುರುತಿಸಿದ ಮೇರೆಗೆ, ಸದರಿ ಫೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ನನಗೆ ಚಾರ್ಮಡಿ ಘಾಟ್ ನ ಬಳಿ ಪೆಟ್ಟಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯು ಒಂಟಿ ರಸ್ತೆ ಮತ್ತು ಹಲವು ತಿರುವುಗಳಿಂದ ಕೂಡಿರುತ್ತದೆ ಎಂದರೆ ಸರಿ. ಚಾರ್ಮಡಿ ಘಾಟ್ ನಬಳಿ ನನಗೆ ಪೆಟ್ಟಾದಂತ ಜಾಗದಲ್ಲಿ ನಮ್ಮ ಬಸ್ ನ ಬಲಭಾಗಕ್ಕೆ ಆಳವಾದ ಪ್ರಪಾತವಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ನಮ್ಮ ಬಸ್ ಏರುಮುಖವಾಗಿ ಪ್ರಯಾಣಿಸುತ್ತಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಬಸ್ ನ ತುಂಬ ಜನಗಳು ಇದ್ದರು ಎಂದರೆ ಸರಿ. ಆದ ಕಾರಣ ಬಸ್ ನ್ನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿ. ಒಂದು ವೇಳೆ ಪೋಲಿಸರು ನನ್ನ ಬಳಿ ಹೇಳಿಕೆ ಪಡೆದಿದ್ದರೂ ಸಹಾ ಇದೇ ರೀತಿಯಾಗಿ ಹೇಳಿಕೆ ನೀಡುತ್ತಿದ್ದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.